೬. ನವಲಗುಂದ ತಾಲ್ಲೂಕು ನಾಗನೂರು ಗ್ರಾಮದಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಸ್ಮಶಾನವಿಲ್ಲದಿರುವುದರ ಬಗ್ಗೆ.

ಶ್ರೀ ಎಂ. ಕೆ. ಕುಲಕರ್ಣಿ.—ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಎಲ್ಲ ಮತದವರಿಗೂ ಸ್ಮಶಾನವಿದ್ದರೂ ಮುಸಲ್ಮಾನರಿಗೆ ಪ್ರತ್ಯೇಕ ಸ್ಮಶಾನವಿರುವುದಿಲ್ಲ. ಇದರಿಂದಾಗಿ ಮುಸ್ಲಿಮರಿಗೆ ಬಹಳ ತೊಂದರೆಯಾಗುತ್ತಿದ್ದು, ಅವರಿಗೆ ಸ್ಮಶಾನಕ್ಕಾಗಿ ಪ್ರತ್ಯೇಕ ಸ್ಥಳವನ್ನು ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಎಲ್ಲ ಮತದವರೂ ಸ್ಮಶಾನವನ್ನು ಹೊಂದಿದ್ದಾರೆ, ಮುಸ್ಲಿಂ ಬಾಂಧವರು ಪ್ರತ್ಯೇಕವಾದ ಸ್ಮಶಾನವನ್ನು ಹೊಂದಿರುವುದಿಲ್ಲವೆಂಬ ಅಂಶ ನಿಜವಿರುತ್ತದೆ. ಸದರಿ ಗ್ರಾಮದಲ್ಲಿ ಮುಸ್ಲಿಂ ಬಾಂಧವರಿಗೆ ಅಂತ್ಯಕ್ರಿಯೆ ಜರುಗಿಸಲು ಸ್ಮಶಾನ ಇರುವುದಿಲ್ಲವಾದ್ದರಿಂದ ಈಗಾಗಲೇ ಜಿಲ್ಲಾಧಿಕಾರಿ ಧಾರವಾಡ ಇವರಿಗೆ ಮುಸ್ಲಿಂ ಬಾಂಧವರು ಮನವಿಯನ್ನು ಸಲ್ಲಿಸಿದ್ದು ಸದರಿ ಮನವಿ ಬಗ್ಗೆ ಉಪ ವಿಭಾಗಾಧಿಕಾರಿ, ಧಾರವಾಡ ಇವರು ಸೂಕ್ತ ವಿಚಾರಣೆಯನ್ನು ನಡೆಸುತ್ತಿದ್ದಾರೆ. ಮುಂಜೂರಾತಿಗೆ ಸರ್ಕಾರಿ ಜಮೀನು ಲಭ್ಯವಿರದೆ ಇರುವ ಪ್ರಯುಕ್ತ ಭೂಸ್ವಾಧೀನ ಮಾಡುವ ಬಗ್ಗೆ ಕ್ರಮ ಕೈಕೊಳ್ಳಲಾಗುತ್ತಿದೆ. ಅಲ್ಲಿ ಜಮೀನು ಇಲ್ಲದಿರುವುದರಿಂದ ಅಕ್ವಿಜಿಷನ್ ಮಾಡಿ ಒದಗಿಸಿಕೊಡುತ್ತೇವೆ.

೭. ಉಡುಪಿ ಮತದಾರರ ಕ್ಷೇತ್ರದಲ್ಲಿ ಇನ್ನೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವುದರ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್.—೧೯ ಹೈಸ್ಕೂಲುಗಳು, ೫ ಪದವಿ ಪೂರ್ವ ಕಾಲೇಜುಗಳು ಇರುವ ಉಡುಪಿ ವಿಧಾನಸಭಾ ಮತದಾರ ಕ್ಷೇತ್ರದಲ್ಲಿ ಇರುವ ಏಕೈಕ ಪ್ರಥಮ ದರ್ಜೆ ಕಾಲೇಜು ಗಳಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲದೆ ಬಹಳಷ್ಟು ವಿದ್ಯಾರ್ಥಿಗಳು ದೂರದ ಊರುಗಳಿಗೆ ಹೋಗ ಬೇಕಾಗಿದೆ. ಅನುಕೂಲವಿಲ್ಲದ ಬಡ ಹಾಗೂ ಮಧ್ಯಮ ವರ್ಗದವರು ಕಾಲೇಜು ಶಿಕ್ಷಣದ ಆಸೆಗೇ ತಿಲಾಂಜಲಿ ನೀಡಬೇಕಾಗಿದೆ. ಇಡೀ ಉಡುಪಿ ತಾಲ್ಲೂಕಿನಲ್ಲಿ ಒಂದೇ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲ. ನನ್ನ ಮತದಾರ ಕ್ಷೇತ್ರದಲ್ಲಿ ಉಡುಪಿ, ಮಲ್ಪೆ, ಹಿರಿಯಂಡಕಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಪರಂತು, ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ತೀರಾ ಚಿಂತಾಜನಕವಾಗಿರುವುದರಿಂದ, ಮೇಲೆ ಸೂಚಿಸಿದ ಸ್ಥಳಗಳಲ್ಲಿ ಒಂದರಲ್ಲಾದರೂ ಸರ್ಕಾರಿ ಕಾಲೇಜು ತೆರೆಯುವ ಮೂಲಕ ಸರ್ಕಾರ, ವಿದ್ಯಾರ್ಥಿ ಸಮುದಾಯದ ಹಿತರಕ್ಷಣೆಗೆ ಬರಬೇಕೆಂದೂ, ಉಳಿದೆಡೆಗಳಲ್ಲಿ ಮುಂದಿನ ವರ್ಷಗಳಲ್ಲಿ ತೆರೆಯಬೇಕೆಂದೂ, ಮನುಕುಲದ ಮಮತೆಯ ಆರಾಧ್ಯ ದೇವತೆ ಶ್ರೀಕೃಷ್ಣನ ಸನ್ನಿಧಿಯ ಪರಿಸರದಲ್ಲಿ ಸರ್ಕಾರ ಸಹೃದಯತೆಯಿಂದ ಈ ಸವಲತ್ತು ಕಲ್ಪಿಸಿದಲ್ಲಿ, ಸಹಸ್ರಾರು ಮಕ್ಕಳ ಹಾಗೂ ಪೋಷಕರ ಶುಭಾಶಯ ಸರ್ಕಾರಕ್ಕೆ ದೊರಕಿ, ಆಗಲಾದರೂ ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದಾಗಲೆಂದು ಹಾರೈಸುತ್ತೇನೆ.

ಶ್ರೀ ಎಂ. ರಘುಪತಿ.—ಉಡುಪಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿಶ್ವವಿದ್ಯಾನಿಲಯದವರ ಪರವಾನಗಿಯನ್ನು ಪಡೆದು (ಪರವಾನಗಿ ಬಂದಮೇಲೆ) ಆದ್ಯತೆ ಮೇರೆಗೆ ಕಾಲೇಜು ಪ್ರಾರಂಭಿಸುವುದಕ್ಕೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಯತ್ನಿಸುತ್ತೇವೆ.

೮. ಶಿಕಾರಿಪುರ ನಗರದ ಕಂಬೈಂಡ್ಡ್ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದಿರುವುದರ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರ ನಗರದ ಕಂಬೈಂಡ್ ಆಸ್ಪತ್ರೆಯಲ್ಲಿ ೬ ಜನ ನಾಲ್ಕನೇ ದರ್ಜೆ ನೌಕರರು, ಮೇಲ್‌ನರ್ಸ್, ಹಲ್ಲಿನ ಡಾಕ್ಟರ್ ಇತರೆ ಸಿಬ್ಬಂದಿ ಇಲ್ಲದೆ ಅಲ್ಲಿ ಬರುವ ರೋಗಿಗಳಿಗೆ ತುಂಬಾ ತೊಂದರೆಯಾಗಿದೆ.